# ಅಳಿಲುಸೇವೆ

ರಾವಣ ಸೀತೆಯ ಕದ್ದಾಗ
ಬಿಡಿಸಲು ರಾಮನು ಹೊರಟಾಗ
ಲಂಕೆಯು ಕಡಲಿನ ನಡುವಲ್ಲಿ
ದಾರಿಯೆ ಇಲ್ಲದ ಸ್ಥಿತಿಯಲ್ಲಿ
ರಾಮನು ಯೋಚನೆ ಮಾಡಿದನು
ತಮ್ಮ ಲಕ್ಷ್ಮಣನಿಗೆ ಹೇಳಿದನು
ಕಪಿಗಳನೆಲ್ಲಾ ಸೇರಿಸಿದ
ಸೇತುವೆ ಕಟ್ಟಲು ಸೂಚಿಸಿದ

ಮಂಗಗಳಷ್ಟೂ ಒಟ್ಟಾಗಿ
ಸೇತುವೆ ಕೆಲಸವು ಶುರುವಾಗಿ
ಗುಡ್ಡ ಬೆಟ್ಟಗಳ ಕಿತ್ತರು
ಕಡಲಿಗೆ ಅವುಗಳ ಒತ್ತಿದರು
ಪೊಟರೆಯಲಿದ್ದ ಅಳಿಲುಗಳು
ಭರದಲಿ ಸಾಗುವ ಕೆಲಸದೊಳು
ತಾವೂ ಸೇರಲು ಬಯಸಿದವು
ಪುಟುಪುಟು ಹೆಜ್ಜೆಯ ಇರಿಸಿದವು

ಕಡಲಿನ ನೀರಲಿ ಈಜಾಡಿ
ದಂಡೆಯ ಮರಳಲಿ ಉರುಳಾಡಿ
ದೇಹಕೆ ಉಸುಕನು ಅಂಟಿಸುತ
ಸೇತುವೆ ಸ್ಥಳದಲಿ ಉದುರಿಸುತ
ಬ್ರಿಜ್ಜಿನ ಕೆಲಸಕೆ ನೆರವಾದೊ
ದೇವರ ಕರುಣೆಗು ಒಳಗಾದೊ
ರಾಮನು ಹತ್ತಿರ ಸಾಗಿದನು
ಒಲವಿನ ಬೆರಳನು ಸೋಕಿದನು!

ಬೆನ್ನಲಿ ಗೆರೆಗಳು ಮೂಡಿದವು
ರಾಮನ ಪ್ರೇಮವ ಸಾರಿದವು
ಅಳಿಲುಸೇವೆಯದು ಅಂದಿಂದ
ಅಳಿಯದೆ ಉಳಿಯಿತು ಜಗದಿಂದ!

■ ಗಣಪತಿ ಬಾಳೆಗದ್ದೆ



## ಕುಂಚ ಪ್ರಪಂಚ

ಹನಿ ವಿ. ಚೇತನ್
7ನೇ ತರಗತಿ
ಹಾಸನ ಪಬ್ಲಿಕ್ ಶಾಲೆ,
ಹಾಸನ





## ನೀವೂ ಚಿತ್ರ ಬರೆಯಿರಿ

‘ಸುಧಾ’ ವಾರ ಪತ್ರಿಕೆಯ ಎಳೆಯರ ಅಂಗಳ ವಿಭಾಗಕ್ಕೆ ಕಥೆ– ಕವಿತೆ ಜೊತೆ ಮಕ್ಕಳೇ ಬರೆದ ವರ್ಣಚಿತ್ರ– ರೇಖಾಚಿತ್ರಗಳನ್ನು ಕಳುಹಿಸಬಹುದು.

ಇ ಮೇಲ್
editorsu@sudha.co.in

@SudhaWeekly